# ವಿದೇಶಿ ವಿನಿಮಯದ ರವಾನೆಗಳು ಮತ್ತು ವಿದೇಶಿ ವಿನಿಮಯದ ಬಾಂಡುಗಳಲ್ಲಿ ಹಣ ಹೂಡಿಕೆ (ವಿಶೇಷ ರಕ್ಷಣೆಗಳು ಮತ್ತು ವಿನಾಯಿತಿಗಳು) ಅಧಿನಿಯಮ, 1991

**(1991ರ ಅಧಿನಿಯಮ ಸಂಖ್ಯೆ 41)**

**[27.8.2003 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 27ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 91 ರಿಂದ 94 ರವರೆಗಿನ ಪುಟಗಳಲ್ಲಿ ಪ್ರಕಟಿತ]**

**ವಿಷಯಾನುಕ್ರಮಣಿಕೆ**

**ಪ್ರಕರಣಗಳು:**

**ಅಧ್ಯಾಯ - I**

**ಪ್ರಾರಂಭಿಕ**

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ

**ಅಧ್ಯಾಯ - II**

**ವಿದೇಶಿ ವಿನಿಮಯದ ರವಾನೆಗಳು**

2. ಪರಿಭಾಷೆಗಳು
3. ವಿಶೇಷ ರಕ್ಷಣೆಗಳು
4. ಕೆಲವು ಸಂದರ್ಭಗಳಲ್ಲಿ ರವಾನೆಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದು

**ಅಧ್ಯಾಯ - III**

**ವಿದೇಶಿ ವಿನಿಮಯ ಬಾಂಡುಗಳಲ್ಲಿ ಹಣ ಹೂಡಿಕೆ**

5. ಪರಿಭಾಷೆಗಳು
6. ವಿಶೇಷ ರಕ್ಷಣೆಗಳು
7. ಕೆಲವು ಸಂದರ್ಭಗಳಲ್ಲಿ ವಿದೇಶಿ ವಿನಿಮಯ ಬಾಂಡುಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದು

# ವಿದೇಶಿ ವಿನಿಮಯದ ರವಾನೆಗಳು ಮತ್ತು ವಿದೇಶಿ ವಿನಿಮಯದ ಬಾಂಡುಗಳಲ್ಲಿ ಹಣ ಹೂಡಿಕೆ (ವಿಶೇಷ ರಕ್ಷಣೆಗಳು ಮತ್ತು ವಿನಾಯಿತಿಗಳು) ಅಧಿನಿಯಮ, 1991

**(1991ರ ಅಧಿನಿಯಮ ಸಂಖ್ಯೆ 41)**

[18ನೇ ಸೆಪ್ಟೆಂಬರ್, 1991]

ವಿದೇಶಿ ವಿನಿಮಯದಲ್ಲಿ ರವಾನೆಗಳನ್ನು ಸ್ವೀಕರಿಸುವ ವ್ಯಕ್ತಿಗಳಿಗೆ ಮತ್ತು ವಿದೇಶಿ ವಿನಿಮಯ ಬಾಂಡುಗಳನ್ನು ಹೊಂದಿರುವ ವ್ಯಕ್ತಿಗಳಿಗೆ ಕೆಲವು ವಿಶೇಷ ರಕ್ಷಣೆಗಳನ್ನು ನೀಡಲು ಮತ್ತು ಅಂಥ ರವಾನೆಗಳ ಮತ್ತು ಬಾಂಡುಗಳ ಸಂಬಂಧದಲ್ಲಿ ನೇರ ತೆರಿಗೆಗಳಿಂದ ಕೆಲವು ವಿನಾಯಿತಿಗಳನ್ನು ನೀಡಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಶಿಲ್ಕು ಸಂದಾಯಗಳಿಗೆ ಸಂಬಂಧಿಸಿದ ಸ್ಥಿತಿಯು ಕಷ್ಟಕರವಾಗಿರುವುದರಿಂದ ಮತ್ತು ಅಧಿಕ ಪ್ರಮಾಣದ ವಿದೇಶಿ ವಿನಿಮಯವನ್ನು ಆಕರ್ಷಿಸುವ ಅವಶ್ಯಕತೆ ಉಂಟಾಗಿರುವುದರಿಂದ;

ಹಾಗೂ ಅಂಥ ವಿದೇಶಿ ವಿನಿಮಯವನ್ನು ಆಕರ್ಷಿಸುವ ದೃಷ್ಟಿಯಿಂದ ವಿದೇಶಿ ವಿನಿಮಯದಲ್ಲಿ ಸದರಿ ರವಾನೆಗಳನ್ನು ಸ್ವೀಕರಿಸಲು ಮತ್ತು ಸದರಿ ಬಾಂಡುಗಳನ್ನು ಹೊಂದಲು ಕೆಲವು ವ್ಯಕ್ತಿಗಳಿಗೆ ಸಾಧ್ಯವಾಗುವಂತೆ ಮಾಡುವುದಕ್ಕಾಗಿ ಕೆಲವು ವಿಶೇಷ ರಕ್ಷಣೆಗಳನ್ನು ಮತ್ತು ವಿನಾಯಿತಿಗಳನ್ನು ಒದಗಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ನಲವತ್ತೆರಡನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ - I

### ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.-** (1) ಈ ಅಧಿನಿಯಮವನ್ನು ವಿದೇಶಿ ವಿನಿಮಯದ ರವಾನೆಗಳು ಮತ್ತು ವಿದೇಶಿ ವಿನಿಮಯ ಬಾಂಡುಗಳಲ್ಲಿ ಹಣ ಹೂಡಿಕೆ (ವಿಶೇಷ ರಕ್ಷಣೆಗಳು ಮತ್ತು ವಿನಾಯಿತಿಗಳು) ಅಧಿನಿಯಮ, 1991 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

## ಅಧ್ಯಾಯ - II

### ವಿದೇಶಿ ವಿನಿಮಯದ ರವಾನೆಗಳು

**2. ಪರಿಭಾಷೆಗಳು.-** ಈ ಅಧ್ಯಾಯದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸುವ ಹೊರತು,-

(ಎ) "ಸ್ವೀಕರ್ತ" ಎಂದರೆ ಆದಾಯ ತೆರಿಗೆ ಅಧಿನಿಯಮ, 1961 (1961ರ 43) ರ 2ನೇ ಪ್ರಕರಣದ (31)ನೇ ಖಂಡದಲ್ಲಿ ಪರಿಭಾಷಿಸಿರುವಂತೆ ಈ ಅಧ್ಯಾಯದ ಮೇರೆಗೆ ಯಾವುದೇ ರವಾನೆಯನ್ನು ಸ್ವೀಕರಿಸುವ ಒಬ್ಬ ವ್ಯಕ್ತಿ;

(ಬಿ) "ರವಾನೆ" ಎಂದರೆ ಭಾರತದ ಹೊರಗೆ ನಿವಾಸಿಯಾಗಿರುವ ಯಾರೇ ವ್ಯಕ್ತಿಯು ಭಾರತದ ನಿವಾಸಿಯಾಗಿರುವ ಒಬ್ಬ ವ್ಯಕ್ತಿಗೆ ಈ ಅಧಿನಿಯಮವು ಪ್ರಾರಂಭವಾಗುವ ದಿನಾಂಕದಂದು ಅಥವಾ ಆ ತರುವಾಯ, ಆದರೆ ನಿರ್ದಿಷ್ಟಪಡಿಸಿದ * ದಿನಾಂಕಕ್ಕಿಂತ

ಮುಂಚಿತವಾಗಿ ಡ್ರಾಫ್ಟುಗಳು, ಪ್ರವಾಸಿಗರ ಚೆಕ್ಕುಗಳು, ಭಾರತದ ಹೊರಗಿರುವ ಬ್ಯಾಂಕುಗಳಿಗೆ ಬರೆದ ಚೆಕ್ಕುಗಳು, ಟೆಲಿಗ್ರಾಫಿಕ್ ವರ್ಗಾವಣೆಗಳು, ಅಂಚೆ ವರ್ಗಾವಣೆಗಳು, ಮನಿಯಾರ್ಡರುಗಳು-ಈ ರೂಪದಲ್ಲಿ ಅಥವಾ ವಿದೇಶಿ ವಿನಿಮಯ ನಿಯಂತ್ರಣ ಅಧಿನಿಯಮ, 1973ರ ಮೇರೆಗೆ (1973ರ 46) ರಚಿಸಿರುವ ನಿಯಮಗಳ ಮೇರೆಗೆ ಭಾರತದಲ್ಲಿ ನಿರ್ವಹಿಸಲಾಗುವ ಅನಿವಾಸಿ ಖಾತೆ (ಬಾಹ್ಯ), ವಿದೇಶಿ ಕರೆನ್ಸಿ ಅನಿವಾಸಿ ಖಾತೆ ಅಥವಾ ವಿದೇಶಿ ಕರೆನ್ಸಿ ಅನಿವಾಸಿ ವಿಶೇಷ ಠೇವಣಿ ಖಾತೆಯಿಂದ ವರ್ಗಾವಣೆಯ ಮೂಲಕ ಮಾಡಿರುವ ರವಾನೆ.

* ದಿನಾಂಕ 1.2.1992ನ್ನು ನಿರ್ದಿಷ್ಟಪಡಿಸಲಾಗಿದೆ.

**ವಿವರಣೆ:-** ಈ ಖಂಡದ ಉದ್ದೇಶಗಳಿಗಾಗಿ "ನಿರ್ದಿಷ್ಟಪಡಿಸಿದ ದಿನಾಂಕ" ಎಂದರೆ, ಡಿಸೆಂಬರ್ 1991 ರ ಮೊದಲನೆ ದಿನ ಅಥವಾ ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ತರುವಾಯದ ಇತರ ದಿನಾಂಕ;

(ಸಿ) ಈ ಅಧ್ಯಾಯದಲ್ಲಿ ಬಳಸಿರುವ ಆದರೆ ಪರಿಭಾಷಿಸಿರದ ಮತ್ತು ವಿದೇಶಿ ವಿನಿಮಯ ನಿಯಂತ್ರಣ ಅಧಿನಿಯಮ, 1973 ರಲ್ಲಿ (1973ರ 46) ಪರಿಭಾಷಿಸಿರುವ ಎಲ್ಲ ಇತರ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**3. ವಿಶೇಷ ರಕ್ಷಣೆಗಳು.-** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ,-

(ಎ) ಈ ಅಧ್ಯಾಯದ ಮೇರೆಗೆ ರವಾನೆಗಳನ್ನು ಸ್ವೀಕರಿಸುವ ಉದ್ದೇಶಗಳಿಗಾಗಿ ಭಾರತದ ರಿಸರ್ವ್ ಬ್ಯಾಂಕು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಯೋಜನೆಗೆ ಅನುಸಾರವಾಗಿ ಈ ಅಧ್ಯಾಯದ ಮೇರೆಗೆ ವಿಶೇಷ ರಕ್ಷಣೆಗಳನ್ನು ಕ್ಲೇಮು ಮಾಡುವ ಯಾರೇ ಸ್ವೀಕರ್ತನನ್ನು, ಯಾವುದೇ ಉದ್ದೇಶಕ್ಕಾಗಿಯಾಗಲಿ ಅವನಿಗೆ ಮಾಡಲಾಗಿರುವ ರವಾನೆಯ ಸ್ವರೂಪವನ್ನು ಮತ್ತು ಮೂಲವನ್ನು ಬಹಿರಂಗಪಡಿಸುವಂತೆ ಅಗತ್ಯಪಡಿಸತಕ್ಕದ್ದಲ್ಲ;

(ಬಿ) ಸ್ವೀಕರ್ತನು ಅಂಥ ರವಾನೆಯನ್ನು ಸ್ವೀಕರಿಸಿರುವನೆಂಬ ಕಾರಣಕ್ಕಾಗಿ ಅವನ ವಿರುದ್ಧ, ಅಂಥ ಯಾವುದೇ ಕಾನೂನಿನ ಮೇರೆಗೆ ತನಿಖೆ ಅಥವಾ ವಿಚಾರಣೆಯನ್ನು ಪ್ರಾರಂಭಿಸತಕ್ಕದ್ದಲ್ಲ;

(ಸಿ) ಸ್ವೀಕರ್ತನು ರವಾನೆಯನ್ನು ಸ್ವೀಕರಿಸಿರುವನೆಂಬ ಸಂಗತಿಯನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ಅಂಥ ಕಾನೂನಿನ ಮೇರೆಗೆ ಯಾವುದೇ ಅಪರಾಧದ ಸಂಬಂಧದ ಅಥವಾ ಯಾವುದೇ ದಂಡವನ್ನು ವಿಧಿಸುವುದಕ್ಕೆ ಸಂಬಂಧಿಸಿದ ಯಾವುದೇ ವ್ಯವಹರಣೆಗಳಲ್ಲಿ ಅದನ್ನು ಸಾಕ್ಷ್ಯವಾಗಿ ಅಂಗೀಕರಿಸಲು ಅವಕಾಶವಿರತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಇರುವುದಾವುದೂ,-

(ಎ) ಯಾವುದೇ ವಿದೇಶಿ ವಿನಿಮಯವನ್ನು, ಭಾರತದ ಒಳಗೆ ತರಬೇಕಾದ ಅವಧಿಯು ಮುಕ್ತಾಯಗೊಂಡಿರದಿದ್ದರೆ ಅಥವಾ ಕೇಂದ್ರ ಸರ್ಕಾರ ಅಥವಾ ಭಾರತದ ರಿಸರ್ವ್ ಬ್ಯಾಂಕು ಅಥವಾ ಯಾವುದೇ ಇತರ ಪ್ರಾಧಿಕಾರವು ಯಾವುದೇ ರೀತಿಯಲ್ಲಿ ಅಂಥ ಅವಧಿಯನ್ನು ವಿಸ್ತರಿಸಿರುವಲ್ಲಿ ಮತ್ತು ಹಾಗೆ ವಿಸ್ತರಿಸಿದ ಅವಧಿಯು ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಮುಕ್ತಾಯಗೊಂಡಿರದಿದ್ದರೆ ಅಂಥ ವಿದೇಶೀ ವಿನಿಮಯವನ್ನು-

(i)ವಿದೇಶಿ ವಿನಿಮಯ ನಿಯಂತ್ರಣ ಅಧಿನಿಯಮ, 1973 (1973ರ 46) ರ; ಅಥವಾ

(ii) ವಿದೇಶಿ ವಿನಿಮಯ ನಿಯಂತ್ರಣ ಅಧಿನಿಯಮ, 1973ರೊಂದಿಗೆ (1973ರ 46) ಓದಿಕೊಂಡ ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರ–

– ಯಾವುದೇ ಉಪಬಂಧಗಳ ಮೇರೆಗೆ ಅಂಥ ವಿದೇಶೀ ವಿನಿಮಯವನ್ನು ಭಾರತದ ಒಳಗೆ ತರುವುದಕ್ಕೆ ಅನ್ವಯಿಸತಕ್ಕದ್ದಲ್ಲ;

(ಬಿ) ಭಾರತ ದಂಡಸಂಹಿತೆಯ ಅಧ್ಯಾಯ IX ಅಥವಾ ಅಧ್ಯಾಯ XVII ರ ಮೇರೆಗೆ, ನಿದ್ರಾಜನಕ ಔಷಧಗಳು ಮತ್ತು ಮನೋದ್ರೇಕ ವಸ್ತುಗಳ ಅಧಿನಿಯಮ, 1985, ಭಯೋತ್ಪಾದಕ ಮತ್ತು ವಿಚ್ಛಿದ್ರಕಾರಿ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, 1987, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988ರ ಮೇರೆಗೆ ದಂಡನಾರ್ಹವಾದ ಯಾವುದೇ ಅಪರಾಧದ ಪ್ರಾಸಿಕ್ಯೂಷನ್‌ಗೆ ಸಂಬಂಧಪಟ್ಟಂತೆ ಅಥವಾ ಯಾವುದೇ ಸಿವಿಲ್ ಹೊಣೆಗಾರಿಕೆಯನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಅನ್ವಯವಾಗತಕ್ಕದ್ದಲ್ಲ.

(3) ಕೇಂದ್ರ ಸರ್ಕಾರವು, (1)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ಅಧಿಸೂಚಿಸಲಾದ ಯೋಜನೆಯನ್ನು, ಅದನ್ನು ಅಧಿಸೂಚಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವ ವ್ಯವಸ್ಥೆ ಮಾಡತಕ್ಕದ್ದು.

**4. ಕೆಲವು ಸಂದರ್ಭಗಳಲ್ಲಿ ರವಾನೆಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದು.**– 3ನೇ ಪ್ರಕರಣದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ,–

(ಎ) ಈ ಅಧ್ಯಾಯದ ಮೇರೆಗೆ ಸ್ವೀಕರಿಸಲಾದ ಯಾವುದೇ ರವಾನೆಯನ್ನು ಆದಾಯ ತೆರಿಗೆ ಅಧಿನಿಯಮ, 1961 (1961ರ 43) ರ ಮೇರೆಗೆ ಯಾವುದೇ ವ್ಯವಹರಣೆಯ ಉದ್ದೇಶಕ್ಕಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ ಮತ್ತು, ವಿಶೇಷವಾಗಿ, ಆ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ನಿರ್ಧರಣೆ, ಪುನರ್‌ನಿರ್ಧರಣೆ, ಅಪೀಲು, ಉಲ್ಲೇಖ ಅಥವಾ ಇತರ ವ್ಯವಹರಣೆಯಲ್ಲಿ ಯಾವುದೇ ವಜಾವಟ್ಟು ಅಥವಾ ಪರಿಹಾರವನ್ನು ಕ್ಲೇಮು ಮಾಡಲು ಅಥವಾ ಆ ಅಧಿನಿಯಮದ ಮೇರೆಗೆ ಮಾಡಿರುವ ಯಾವುದೇ ನಿರ್ಧರಣೆ ಅಥವಾ ಪುನರ್ ನಿರ್ಧರಣೆಯನ್ನು, ತಾನು ಅಂಥ ರವಾನೆಯನ್ನು ಸ್ವೀಕರಿಸಿದ್ದಾನೆಂಬ ಕಾರಣದ ಮೇಲೆ ಪುನಃ ಮಾಡುವಂತೆ ಕೇಳಲು ಸ್ವೀಕರ್ತನು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**ವಿವರಣೆ:**– ಸಂದೇಹ ನಿವಾರಣೆಗಾಗಿ, ಸ್ವೀಕರ್ತನಿಗೆ ರವಾನೆಯ ಮೊತ್ತದಿಂದ ಪ್ರಾಪ್ತವಾಗುವ ಅಥವಾ ಉಂಟಾಗುವ ಅಥವಾ ಪ್ರಾಪ್ತವಾಗುವುದೆಂದು ಅಥವಾ ಉಂಟಾಗುವುದೆಂದು ಭಾವಿಸಲಾಗುವ ಯಾವುದೇ ಆದಾಯಕ್ಕೆ ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರ ಉಪಬಂಧಗಳು, ಅನ್ವಯಿಸುವುದೆಂದು ಈ ಮೂಲಕ ಘೋಷಿಸಲಾಗಿದೆ.

(ಬಿ) ಏಪ್ರಿಲ್ 1992ರ ಒಂದನೇ ದಿನಾಂಕಕ್ಕೆ ಮುಂಚಿತವಾಗಿ ಪ್ರಾರಂಭವಾಗುವ ಯಾವುದೇ ತೆರಿಗೆ ನಿರ್ಧರಣಾ ವರ್ಷಕ್ಕೆ ಸಂಬಂಧಪಟ್ಟಂತೆ ಸಂಪತ್ತು ತೆರಿಗೆ ಅಧಿನಿಯಮ, 1957 (1957ರ 27)ರ ಮೇರೆಗೆ ತೆರಿಗೆದಾರನ ನಿವ್ವಳ ಸಂಪತ್ತನ್ನು ಲೆಕ್ಕಹಾಕುವ ಉದ್ದೇಶಗಳಿಗಾಗಿ, ಈ ಅಧ್ಯಾಯದ ಮೇರೆಗೆ ಸ್ವೀಕರಿಸಲಾದ ಯಾವುದೇ ರವಾನೆ, ಅಂಥ ಯಾರೇ ತೆರಿಗೆದಾರನ ಆಸ್ತಿಗಳ ಭಾಗವಾಗತಕ್ಕದ್ದಲ್ಲ.

## ಅಧ್ಯಾಯ – III

### ವಿದೇಶಿ ವಿನಿಮಯ ಬಾಂಡುಗಳಲ್ಲಿ ಹಣ ಹೂಡಿಕೆ

**5. ಪರಿಭಾಷೆಗಳು.–** (1) ಈ ಅಧ್ಯಾಯದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) 'ವಿದೇಶಿ ವಿನಿಮಯ ಬಾಂಡುಗಳು' ಎಂದರೆ ಭಾರತದ ರಿಸರ್ವ್ ಬ್ಯಾಂಕು ರಾಜಪತ್ರದಲ್ಲಿ ಈ ಸಂಬಂಧದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಯೋಜನೆಗೆ ಅನುಸಾರವಾಗಿ ಭಾರತದ ಸ್ಟೇಟ್ ಬ್ಯಾಂಕ್ ಅಧಿನಿಯಮ, 1955 (1955ರ 28)ರ ಮೇರೆಗೆ ರಚಿತವಾಗಿರುವ ಭಾರತೀಯ ಸ್ಟೇಟ್ ಬ್ಯಾಂಕ್ ಹೊರಡಿಸಿದ ಬಾಂಡುಗಳು, ಆದರೆ ಈ ಅಧಿನಿಯಮ ಪ್ರಾರಂಭವಾಗುವ ದಿನಾಂಕದಂದು ಅಥವಾ ಆ ತರುವಾಯ ಆದರೆ, ನಿರ್ದಿಷ್ಟಪಡಿಸಿರುವ * ದಿನಾಂಕಕ್ಕೆ ಮುಂಚಿತವಾಗಿ ಆ ಹಣವನ್ನು ಅವುಗಳಲ್ಲಿ ಹೂಡಿರಬೇಕು.

* ದಿನಾಂಕ 1.2.1992ನ್ನು ನಿರ್ದಿಷ್ಟಪಡಿಸಲಾಗಿದೆ.

**ವಿವರಣೆ:–** ಈ ಖಂಡದ ಉದ್ದೇಶಗಳಿಗಾಗಿ "ನಿರ್ದಿಷ್ಟಪಡಿಸಿದ ದಿನಾಂಕ" ಎಂದರೆ ಡಿಸೆಂಬರ್ 1991ರ ಮೊದಲನೆ ದಿನ ಅಥವಾ ಕೇಂದ್ರ ಸರ್ಕಾರವು ಈ ಸಂದರ್ಭದಲ್ಲಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ತರುವಾಯದ ಇತರ ದಿನಾಂಕ.

(ಬಿ) "ಅನಿವಾಸಿ ಭಾರತೀಯ" ಎಂದರೆ ಭಾರತದ ಒಬ್ಬ ನಾಗರೀಕನಾಗಿರುವ ಅಥವಾ ಭಾರತದ ಹೊರಗಿನ ನಿವಾಸಿಯಾಗಿದ್ದು, ಭಾರತೀಯ ಮೂಲದವನಾಗಿರುವ ಒಬ್ಬ ವ್ಯಕ್ತಿ;

**ವಿವರಣೆ(1):–** ಒಬ್ಬ ವ್ಯಕ್ತಿಯು –

(i) ಸಂವಿಧಾನದ ಅಥವಾ ನಾಗರಿಕತ್ವ ಅಧಿನಿಯಮ, 1955 (1955ರ 57)ರ ಆಧಾರದ ಮೇಲೆ ಅವನಾಗಲಿ ಅಥವಾ ಅವನ ತಂದೆ-ತಾಯಿಯರಲ್ಲಿ ಯಾರೊಬ್ಬರಾಗಲಿ ಅಥವಾ ಅವನ ಅಜ್ಜ ಅಥವಾ ಅಜ್ಜಿಯರಲ್ಲಿ ಯಾರೇ ಆಗಲಿ ಭಾರತದ ನಾಗರಿಕನಾಗಿದ್ದರೆ; ಅಥವಾ

(ii) ಯಾವುದೇ ಸಮಯದಲ್ಲಿ ಅವನು ಭಾರತದ ಪಾಸ್‌ಪೋರ್ಟ್‌ನ್ನು ಹೊಂದಿದ್ದರೆ

– ಅವನನ್ನು ಭಾರತೀಯ ಮೂಲದವನೆಂದು ಭಾವಿಸತಕ್ಕದ್ದು:

ಪರಂತು, ಪಾಕಿಸ್ತಾನ ಅಥವಾ ಬಾಂಗ್ಲಾದೇಶದ ರಾಷ್ಟ್ರೀಯರನ್ನು ಭಾರತೀಯ ಮೂಲದವರೆಂದು ಭಾವಿಸತಕ್ಕದ್ದಲ್ಲ.

**ವಿವರಣೆ(2):–** ಭಾರತೀಯ ಮೂಲದ ಒಬ್ಬ ವ್ಯಕ್ತಿಯ ಗಂಡ ಅಥವಾ ಹೆಂಡತಿಯನ್ನು (ಪಾಕಿಸ್ತಾನ ಅಥವಾ ಬಾಂಗ್ಲಾದೇಶದ ರಾಷ್ಟ್ರೀಯರಾಗಿರದ) ಭಾರತೀಯ ಮೂಲದವನೆಂದು/ಳೆಂದು ಭಾವಿಸತಕ್ಕದ್ದು.

(ಸಿ) "ಸಾಗರೋತ್ತರ ನಿಗಮಿತ ನಿಕಾಯ" ಎಂದರೆ, ಅದು ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ, ಭಾರತದ ಹೊರಗಿನ ಒಂದು ದೇಶದ ಕಾನೂನುಗಳ ಮೇರೆಗೆ ಸ್ಥಾಪಿತವಾಗಿದ್ದು, ಅದರಲ್ಲಿ ಯಾರೇ ಅನಿವಾಸಿ ಭಾರತೀಯನು ಯಾವುದೇ ಹಿತಾಸಕ್ತಿ ಹೊಂದಿರುವಂಥ ಯಾವುದೇ ಸಂಸ್ಥೆ, ಸಂಘ ಅಥವಾ ನಿಕಾಯ;

(ಡಿ) ಈ ಅಧ್ಯಾಯದಲ್ಲಿ ಬಳಸಿರುವ, ಆದರೆ ಪರಿಭಾಷಿಸಿರದ ಮತ್ತು ವಿದೇಶಿ ವಿನಿಮಯ ನಿಯಂತ್ರಣ ಅಧಿನಿಯಮ, 1973 (1973ರ 46)ರಲ್ಲಿ ಪರಿಭಾಷಿಸಿರುವ ಎಲ್ಲ ಪದಗಳು ಮತ್ತು

ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

(2) ಕೇಂದ್ರ ಸರ್ಕಾರವು (1) ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ಅಧಿಸೂಚಿಸಲಾದ ಯೋಜನೆಯನ್ನು, ಅದನ್ನು ಅಧಿಸೂಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ವ್ಯವಸ್ಥೆ ಮಾಡತಕ್ಕದ್ದು.

**6. ವಿಶೇಷ ರಕ್ಷಣೆಗಳು.-** (1) ಸಂಪತ್ತು ತೆರಿಗೆ ಅಧಿನಿಯಮ, 1957 (1957ರ 27), ದಾನ ತೆರಿಗೆ ಅಧಿನಿಯಮ, 1958 (1958ರ 18), ಆದಾಯ ತೆರಿಗೆ ಅಧಿನಿಯಮ, 1961 (1961ರ 43), ವಿದೇಶಿ ವಿನಿಮಯ ನಿಯಂತ್ರಣ ಅಧಿನಿಯಮ, 1973 (1973ರ 46) ಮತ್ತು ವಿದೇಶಿ ಕೊಡುಗೆ (ನಿಯಂತ್ರಣ) ಅಧಿನಿಯಮ, 1976 (1976ರ 49) ರಲ್ಲಿ ಏನೇ ಇದ್ದರೂ,-

(ಎ) ವಿದೇಶಿ ವಿನಿಮಯ ಬಾಂಡುಗಳನ್ನು ಹೊಂದಿರುವ ಯಾರೇ ಅನಿವಾಸಿ ಭಾರತೀಯನು ಅಥವಾ ಸಾಗರೋತ್ತರ ನಿಗಮಿತ ನಿಕಾಯವು ಅಥವಾ ಅಂಥ ಅನಿವಾಸಿ ಭಾರತೀಯನು ಅಥವಾ ಸಾಗರೋತ್ತರ ನಿಗಮಿತ ನಿಕಾಯವು ಅಂಥ ಬಾಂಡುಗಳನ್ನು ಭಾರತದಲ್ಲಿ ನಿವಾಸಿಯಾಗಿರುವ ಯಾವ ವ್ಯಕ್ತಿಗೆ ದಾನವಾಗಿ ನೀಡಿರುವುದೋ ಆ ಯಾರೇ ವ್ಯಕ್ತಿಯು, ಯಾವುದೇ ಉದ್ದೇಶಕ್ಕಾಗಿ ಅಂಥ ಬಾಂಡುಗಳಲ್ಲಿ ಹಣಹೂಡಿಕೆಯ ಸ್ವರೂಪ ಮತ್ತು ಮೂಲವನ್ನು ಬಹಿರಂಗ ಪಡಿಸುವುದು ಅಗತ್ಯವಿರತಕ್ಕದ್ದಲ್ಲ;

(ಬಿ) (ಎ) ಖಂಡದಲ್ಲಿ ಉಲ್ಲೇಖಿಸಲಾಗಿರುವ ಯಾರೇ ವ್ಯಕ್ತಿಯ ವಿರುದ್ಧ ಅಂಥ ವ್ಯಕ್ತಿಯು ಅಂಥ ಬಾಂಡುಗಳನ್ನು ಹೊಂದಿರುವನೆಂಬ ಕಾರಣದ ಮೇಲೆ, ಸದರಿ ಅಧಿನಿಯಮಗಳ ಪೈಕಿ ಯಾವುದೇ ಅಧಿನಿಯಮದ ಮೇರೆಗೆ ಯಾವುದೇ ತನಿಖೆ ಅಥವಾ ವಿಚಾರಣೆಯನ್ನು ಪ್ರಾರಂಭಿಸತಕ್ಕದ್ದಲ್ಲ;

(ಸಿ) (ಎ) ಖಂಡದಲ್ಲಿ ಉಲ್ಲೇಖಿಸಲಾದ ಯಾರೇ ವ್ಯಕ್ತಿಯು ಅಂಥ ಬಾಂಡುಗಳನ್ನು ಹೊಂದಿರುವನೆಂಬ ಸಂಗತಿಯನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ಅಂಥ ಯಾವುದೇ ಕಾನೂನು ಮೇರೆಗಿನ ಅಪರಾಧದ ಸಂಬಂಧದ ಅಥವಾ ಯಾವುದೇ ದಂಡವನ್ನು ವಿಧಿಸುವುದಕ್ಕೆ ಸಂಬಂಧಿಸಿದ ಯಾವುದೇ ವ್ಯವಹರಣೆಗಳಲ್ಲಿ ಅದನ್ನು ಸಾಕ್ಷ್ಯವಾಗಿ ಅಂಗೀಕರಿಸಲು ಅವಕಾಶವಿರತಕ್ಕದ್ದಲ್ಲ.

(2) (i)ನೇ ಉಪ-ಪ್ರಕರಣದಲ್ಲಿರುವುದಾವುದೂ,-

ಯಾವುದೇ ವಿದೇಶಿ ವಿನಿಮಯವನ್ನು, ಭಾರತದೊಳಗೆ ತರಬೇಕಾದ ಅವಧಿಯು ಮುಕ್ತಾಯಗೊಂಡಿರದಿದ್ದರೆ ಅಥವಾ ಕೇಂದ್ರ ಸರ್ಕಾರ ಅಥವಾ ಭಾರತದ ರಿಸರ್ವ್ ಬ್ಯಾಂಕು ಅಥವಾ ಯಾವುದೇ ಇತರ ಪ್ರಾಧಿಕಾರವು ಯಾವುದೇ ರೀತಿಯಲ್ಲಿ ಅಂಥ ಅವಧಿಯನ್ನು ವಿಸ್ತರಿಸಿರುವಲ್ಲಿ ಮತ್ತು ಹಾಗೆ ವಿಸ್ತರಿಸಿದ ಅವಧಿಯು ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಮುಕ್ತಾಯಗೊಂಡಿರದಿದ್ದರೆ ಅಂಥ ವಿದೇಶೀ ವಿನಿಮಯವನ್ನು-

(i) ವಿದೇಶಿ ವಿನಿಮಯ ನಿಯಂತ್ರಣ ಅಧಿನಿಯಮ, 1973 (1973ರ 46); ಅಥವಾ

(ii) ವಿದೇಶಿ ವಿನಿಮಯ ನಿಯಂತ್ರಣ ಅಧಿನಿಯಮ, 1973 (1973ರ 46) ರೊಂದಿಗೆ ಓದಿಕೊಂಡ ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರ

- ಯಾವುವೇ ಉಪಬಂಧಗಳ ಮೇರೆಗೆ ಭಾರತದ ಒಳಗೆ ತರುವುದಕ್ಕೆ ಅನ್ವಯಿಸತಕ್ಕದ್ದಲ್ಲ.

**7.ಕೆಲವು ಸಂದರ್ಭಗಳಲ್ಲಿ ವಿದೇಶಿ ವಿನಿಮಯ ಬಾಂಡುಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದು.-** 6ನೇ ಪ್ರಕರಣದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ,-

(ಎ) ಆದಾಯ ತೆರಿಗೆ ಅಧಿನಿಯಮ, 1961 (1961ರ 43) ರ ಉಪಬಂಧಗಳು ವಿದೇಶಿ ವಿನಿಮಯ ಬಾಂಡುಗಳ ಸಂಬಂಧದಲ್ಲಿ ಪ್ರಾಪ್ತವಾಗುವ ಯಾವುದೇ ಬಡ್ಡಿಗೆ ಅನ್ವಯವಾಗತಕ್ಕದ್ದಲ್ಲ;

(ಬಿ) ಸಂಪತ್ತು ತೆರಿಗೆ ಅಧಿನಿಯಮ, 1957 (1957ರ 27) ರ ಉಪಬಂಧಗಳು ವಿದೇಶಿ ವಿನಿಮಯ ಬಾಂಡುಗಳ ಸಂಬಂಧದಲ್ಲಿ ಅನ್ವಯವಾಗತಕ್ಕದ್ದಲ್ಲ;

(ಸಿ) ದಾನ ತೆರಿಗೆ ಅಧಿನಿಯಮ, 1958 (1958ರ 18)ರ ಉಪಬಂಧಗಳು ಅನಿವಾಸಿ ಭಾರತೀಯನು ಭಾರತದ ನಿವಾಸಿಯಾಗುವಲ್ಲಿ ಮತ್ತು ವಿದೇಶಿ ವಿನಿಮಯ ಬಾಂಡುಗಳನ್ನು ದಾನವಾಗಿ ಕೊಟ್ಟಲ್ಲಿ, ಅನ್ವಯಿಸತಕ್ಕದ್ದಲ್ಲ.

* * * * *